ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರತಿ ಆರ್ಥಿಕ ಸಾಲಿಗೆ ರಾಜ್ಯದಲ್ಲಿರುವ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸಲು ರೂ. 3,26,59,000-00 ನೀಡಲಾಗಿದೆ. ಮಂಜೂರಾದ ಆಯವ್ಯಯದಲ್ಲಿ ಶೇಕಡ 80 ರಷ್ಟು ಹಣವನ್ನು ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಗ್ರಂಥಗಳನ್ನು ಶೇಕಡ 10 ರಷ್ಟು ಮೌಲ್ಯದ ಇಂಗ್ಲೀಷ್ ಪುಸ್ತಕಗಳನ್ನು ಖರೀದಿಸಲಾಗುವುದು.

ಕನ್ನಡ ಪುಸ್ತಕಗಳು	2,61,27,200-00
ಇತರ ಭಾರತೀಯ ಭಾಷಾ ಪುಸ್ತಕಗಳು	32,65,900-00
ಇಂಗ್ಲೀಷ್ ಪುಸ್ತಕಗಳು	32,65,900-00
	3,26,59,000-00

ಆ) ರಾಜ್ಯದಲ್ಲಿ 2755 ಗ್ರಂಥಾಲಯಗಳಿದ್ದು, ಈ ಗ್ರಂಥಾಲಯಗಳಲ್ಲಿ 90.00 ಲಕ್ಷ ಪುಸ್ತಕಗಳು ಇದ್ದು, ಪ್ರತಿದಿನ 5.29 ಲಕ್ಷ ಜನ ಲಾಭ ಪಡೆಯುತ್ತಿದ್ದಾರೆ.

ಇ) ದಿನಾಂಕ : 10-11-66 ರಂದು ಮೈಸೂರು ನಗರ ಕೇಂದ್ರ ಗ್ರಂಥಾಲಯ ಪ್ರಾರಂಭವಾಯಿತು. 4,08,730 ಪುಸ್ತಕಗಳು ಇದೆ. ಪ್ರಸ್ತುತ ಗ್ರಂಥಾಲಯದಲ್ಲಿ ಸ್ಥಳದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರತಿ ಸಾಲಿಗೆ ರೂ 32.00 ಲಕ್ಷಗಳನ್ನು ನೀಡಲಾಗುತ್ತಿದೆ.

ಈ) 1996-97 -ರೂ. 3,07,000-00

1997-98 -ರೂ. 9,83,478-00

1998-99 -ರೂ. 15,35,801-00

ಒಟ್ಟು -ರೂ. 28,26,279-00

ಉ) ಹೌದು

ಊ) ಆದಷ್ಟು ಬೇಗನೆ

ಬೆಂಗಳೂರಿನ ಘೋಷಾ ಆಸ್ಪತ್ರೆಯನ್ನು ಬೋಧಕ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು

1564 (1754) ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರು ಘೊಪ ಆಸ್ಪತ್ರೆಯನ್ನು ಬೋಧಕ ಆಸ್ಪತ್ರೆ ಎಂದು ಘೋಷಿಸಲಾಗಿದೆಯೆ?

ಆ) ಹಾಗಿದ್ದಲ್ಲಿ ವೈದ್ಯಕೀಯಕೆ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಮೇಲ್ಕಂಡ ಆಸ್ಪತ್ರೆಯನ್ನು ಬೋಧಕ ಆಸ್ಪತ್ರೆಯಂದು ಘೋಷಿಸಿ ಸದರಿ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಉದ್ದೇಶಿಸಿದೆಯೆ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು :

ಅ) ಇಲ್ಲ

ಆ) ಇಲ್ಲ

ಆಂಗ್ಲೋ ಇಂಡಿಯನ್ ಸಮುದಾಯದವರಿಗೆ ಶಿಕ್ಷಣ ಸಂಘಗಳಲ್ಲಿ ಸ್ಥಾನಗಳನ್ನು ಕಾದಿರಿಸುವುದು

1565 (1761) ಶ್ರೀ ರೋಜರ್ ಬಿನ್ನಿ (ನಾಮನಿರ್ದೇಶನ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಆಂಗ್ಲೋ ಇಂಡಿಯನ್ ಸಮುದಾಯದವರಿಗೆ ಸಿ.ಇ.ಟಿ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಕಾದಿರಿಸಲು ಸರ್ಕಾರ ಅವಕಾಶ ಕಲ್ಪಿಸಿದೆಯೆ?

ಆ) ಹಾಗಿದ್ದಲ್ಲಿ ಎಂದಿನಿಂದ ಈ ಅವಕಾಶ ಕಲ್ಪಿಸಲಾಗಿದೆ ಮತ್ತು ಅವುಗಳು ಯಾವುವು?

ಇ) ಇಲ್ಲದಿದ್ದಲ್ಲಿ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಕಾದಿರಿಸಲು ಸರ್ಕಾರದ ಸೂಕ್ತ ಅವಕಾಶ ಕಲ್ಪಿಸುವುದೆ.

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಇಂಜಿನಿಯರಿಂಗ್ ಪ್ರವೇಶಕ್ಕೆ ಸಿ.ಇ.ಟಿ ಮತಿಯಿಂದ 02 ಸ್ಥಾನಗಳು ಮತ್ತು ಡಿಪ್ಲೋಮೊ ಪ್ರವೇಶಕ್ಕೆ ಪ್ರಾನ್ಸಿಪಾಲರು, ಎಸ್.ಜಿ. (ಸರ್ಕಾರ) ಪಾಲಿಟೆಕ್ನಿಕ್, ಬೆಂಗಳೂರು ಇವರಿಂದ 02 ಸ್ಥಾನಗಳ ಹಂಚಿಕೆ ಮಾಡಲಾಗುತ್ತಿದೆ. ಈ ಸೌಲಭ್ಯ 1993ರಿಂದ ಇಂಜಿನಿಯರಿಂಗ್‌ನಲ್ಲೂ 1982 ರಿಂದ ಪಾಲಿಟೆಕ್ನಿಕ್‌ನಲ್ಲೂ ಲಭ್ಯವಿರುತ್ತದೆ.

ಇ) ಉದ್ಭವಿಸುವುದಿಲ್ಲ

ಚಾಮರಾಜನಗರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

1566 (1762) ಶ್ರೀ ಜಿ. ರಾಜುಗೌಡ (ಹನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಚಾಮರಾಜನಗರದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪಾಥಮಿಕ ಆರೋಗ್ಯ ಕೇಂದ್ರಗಳಿವೆ.

ಆ) ಆರೋಗ್ಯ ಕೇಂದ್ರಗಳಲ್ಲಿ ಪ್ರತಿಯೊಂದು ಮಂಜೂರಾದ ಹುದ್ದೆಗಳು ಎಲ್ಲೆಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ.

ಇ) ವಾರ್ಷಿಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷದಿ ಸರಬರಾಜಿಗೆ ಎಷ್ಟೆಷ್ಟು ಹಣವನ್ನು ನಿಗದಿಪಡಿಸಲಾಗಿದೆ?